ಅಷ್ಟರಲ್ಲಿ ಹುಡುಗ ಮಸಾಲೆ ಪೂರಿಗಳನ್ನು ತಂದ. ಅದನ್ನು ತಿಂದು ಮುಗಿಸುವವರೆಗೂ ಪ್ರಶಾಂತ ಎಷ್ಟು ಹರಟಿದ ಅಂದರೇ... ನನಗಂತೂ ರೇಗಿಹೋಗಿತ್ತು. ಅವನ ಮಾತು ಎಲ್ಲಿಂದ ಎಲ್ಲಿಗೆ ಜಿಗಿಯುತ್ತೆ ಅಂತನೇ ತಿಳೀತಿರಲಿಲ್ಲ. ಅವಳ ಸೀರೆ, ಕಾಡಿಗೆ, ಹಣೆಗೆ, ಚಂದ್ರ, ಸಮುದ್ರ, ಮರಳ ಕಣ, ರಸ್ತೆಯ ಮೇಲೆ ಚಲಿಸುವ ವಾಹನಗಳು... ಯಾವು ಯಾವುದಕ್ಕೆ ಹೇಗೆ ಸಂಬಂಧಗಳು ಬೆಳೆಯುತ್ತಿದ್ದವೋ, ಹೇಗೋ ಅದು ಬ್ರಹ್ಮನಿಗೇ ಗೊತ್ತು. ಅಂತು ಅವನು ಎಲ್ಲದಕ್ಕೂ ಒಂದು ಚೈನ್ ಕಲ್ಪಿಸುತ್ತಾ ಮಾತನಾಡುತ್ತಿದ್ದ. ಒಟ್ಟಿನಲ್ಲಿ ಅವನಿಗೆ ಗದ್ದಲ ಇರಬೇಕು... ಮತ್ತು ಆ ಗದ್ದಲ ಅವನೇ ಮಾಡುತ್ತಿರಬೇಕು. ತಿಂದಾದ ನಂತರ ಪ್ರಶ್ನಾಳನ್ನು ಕೇಳಿದ: 'ಹೊರಡೋಣವೇನೇ ಬೆಳದಿಂಗಳ ಬಾಲೇ...' ಎಂದು. 'ಅಮ್ಮ, ಅಪ್ಪ ಪುಟ್ಟಿ ಎಲ್ಲರೂ ನಿನ್ನನ್ನೇ ಕಾಯುತ್ತಿದ್ದಾರೆ. ಸಂಜೇನೇ ಹೇಳಿದ್ರು. ನಿಶಾಂತ ಬಂದಿದ್ದ ಇಬ್ಬರೂ ಬೀಚ್‌ಗೆ ಹೋದರು ಅಂತ. ...ಮಾರಾಯ್ತಿ... ನನ್ನ ಅಮ್ಮ ಅಪ್ಪ ಇಬ್ಬರದೂ ಬ್ರಾಡ್ ಮೈಂಡ್. ನನ್ನದೂ ಅಷ್ಟೆ. ಅದಕ್ಕೇ ನಾವು ಯಾರೂ ನೀನು ನಿಶಾಂತನ ಜೊತೆ ಬಂದರೆ ಏನೂ ಹೇಳಲ್ಲ' ಎದೆ ಉಬ್ಬಿಸಿದ.' ಮತ್ತೆ ಇನ್ನೊಂದೇನು ಗೊತ್ತಾ... ಈ ನಿಶಾಂತನ ಕೋತಿ ಮುಖ ನೋಡಿದರೆ ನಿನ್ನ ಯಾವ ಭಾವನೆಯೂ ಅರಳಲ್ಲ ಅಂತ ನನಗೆ ಚೆನ್ನಾಗಿ ಗೊತ್ತು. ಅದಕ್ಕೇ ಧೈರ್ಯವಾಗಿ ರಾತ್ರಿ ಹನ್ನೆರಡು ಗಂಟೆ ಆದರೂ ಸರಿ ಅವನ ಜೊತೆ ನಿನ್ನ ಕಳಿಸ್ತೀವಿ ಗೊತ್ತಾ...' ಜೋರಾಗಿ ನಕ್ಕ.

'ಅವನದೇನೂ ಕೋತಿ ಮುಖವಲ್ಲ. ಚೆನ್ನಾಗೇ ಇದ್ದಾನೆ. ನಿನ್ನನ್ನ ನೀನು ಹೊಗಳಿಕೊಳ್ಳೋಕೆ ಅವನನ್ನ ಯಾಕೆ ತೆಗಳ್ತೀಯ?' ಅರಗಿಣಿ ಬಾಯಿಬಿಟ್ಟಿತು.

'ಓಹ್ಹೋ... ಅದೂ ಒಂದು ಚೆಂದಾನಾ... ಹಾ... ಆ ಅಗಲವಾದ ಹಣೆ ಯಾರಾದ್ರೂ ಎಲೆ ಹಾಸಿ ಊಟ ಮಾಡೋ ತರ... ಹೋಗಲಿ ಅಂದ್ರೆ ಕೂದಲೆಲ್ಲ ಮುಂದೆ ಹಾರಾಡ್ತ ಇರುತ್ತೆ... ಅದನ್ನ ನೀವೆಲ್ಲ ಮುಂಗುರುಳು ಅಂತ ಕರೀತೀರ... ಇನ್ನು ಆ ನೀಳವಾದ ಮೂಗು ...ಸುಂದರ ಅಂತೀರ... ಅದರ ತುದಿ ಎಷ್ಟು ಚೂಪು ಅಂದ್ರೆ ಚಾಕು ತರ... ಕೋಪಿಷ್ಟರಿಗೆ ಇರತ್ತಲ್ಲ ಹಾಗೆ... ಆ ಕಣ್ಣು ದೊಡ್ಡ ದೊಡ್ಡದು... ಏನು ಮಾಡೋಣ ಅದರ ಮೇಲೆ ಎರಡು ದಪ್ಪ ಕಂಬಳಿ ಹುಳುಗಳು ಇವೆಯಲ್ಲ... ಭಯ ತರಿಸುತ್ತೆ... ಇನ್ನು ಬಾಯಿ, ತುಟಿ... ನಿಮಗೆ ಹೆಣ್ಣು ಮಕ್ಕಳಿಗೆ ಪ್ರೀತಿ ಇರುತ್ತೆ... ಯಾಕೆಂದ್ರೆ ಆ ತುಟಿ ಹತ್ತಿರ ಒಂದು ಕರಿ ಮಚ್ಚೆ ಇದೆಯಲ್ಲ ಅದಕ್ಕೆ... ಇನ್ನು ಈ ಎತ್ತರದ ನಿಲುವು, ವ್ಯಕ್ತಿತ್ವನಾದರೂ ಇಷ್ಟ ಪಡೋಣ ಅಂತ ಅಂದುಕೊಂಡರೇ...' ತಡೆಯುತ್ತಾ ವ್ಯಂಗ್ಯವಾಗಿ ಹೇಳಿದವನ ಮಾತು ನನಗೆ ವಿಪರೀತ ಸಿಟ್ಟು ತರಿಸಿತ್ತು.

'ಅಂದುಕೊಂಡರೆ ಏನು... ಏನೋ ಅಂದುಕೊಂಡರೆ?...' ಜೋರಾಗಿ ಕೇಳಿದೆ.

'ಪ್ರಶ್ನಾ ಬಾ. ಹಿಂದೆ ಕೂತುಕೋ...' ಕರೆದ ಪ್ರಶ್ನಾಳನ್ನು. ಅವಳು ಅವನ ಹಿಂದೆ ಕುಳಿತು ಸೊಂಟ ಬಳಸಿದಳು. 'ಹೇಳಿ ಬಿಟ್ಟು ಹೋಗೋ... ಅಂದುಕೊಂಡ್ರೆ... ಏನೋ?' ಮತ್ತೆ ಗಡುಸಾಗಿ ಕೇಳಿದೆ.

'ಅಂದು ಕೊಂಡ್ರೆ... ಹೇಳಿಬಿಟ್ಟೇ ಹೋಗ್ತೀನಿ... ಹೆಬ್ಬಾವು ನೆನಪಾಗುತ್ತೆ' ಅವನ ಜೋರು ನಗುವಿನ ಜೊತೆಗೆ ಬೈಕ್ ಗಡ ಗಡ ಸದ್ದು ಮಾಡುತ್ತಾ ಹೊರಟೇಹೋಯಿತು.

ನಾನು ಧಡ ಧಡ ನಡೆಯುತ್ತಾ ರಸ್ತೆಗೆ ಬಂದೆ. ನನ್ನ ಹೋಂಡಾಗೆ ಒಂದು ಕಿಕ್ ಕೊಟ್ಟು ಮನೆಗೆ ರಭಸವಾಗಿ ಹೋದೆ. ಶ್ರದ್ಧಾ, ನನ್ನ ಹೆಂಡತಿ ಬಾಗಿಲಲ್ಲೇ ಕಾಯುತ್ತಿದ್ದಳು. ಅವಳನ್ನು ಗಮನಿಸದಂತೆ ನೇರವಾಗಿ ಒಳಗೆ ಹೋದೆ. 'ಯಾಕಿಷ್ಟು ಹೊತ್ತು?' ಎಂದು ಕೇಳುತ್ತಲೇ ಹಿಂದೆ ಬಂದಳು. ನಾನು ಮಾತಾಡದೆ ಕನ್ನಡಿ ಮುಂದೆ ನಿಂತೆ. ನನ್ನನ್ನು ನಾನು ಪೂರಾ ನೋಡಿಕೊಂಡೆ.